ಅನುಬಂಧ-I

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1347
ಮಾನ್ಯ ಸದಸ್ಯರ ಹೆಸರು : ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ)
ಉತ್ತರಿಸುವ ದಿನಾಂಕ : 20-03-2007
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು

ಅ) ಕೆ.ಆರ್.ಡಿ.ಸಿ.ಎಲ್. ವತಿಯಿಂದ ಮುಂಡರಗಿ ಮತದಾರ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ;

ಮುಂಡರಗಿ ಮತದಾರರ ಕ್ಷೇತ್ರದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ:

ಅ) ಸೇತುವೆಗಳ ನಿರ್ಮಾಣ:

ಎರಡನೇ ಹಂತದ ಸೇತುವೆ ನಿರ್ಮಾಣ ಯೋಜನೆಯಲ್ಲಿ ಮುಂಡರಗಿ ಕ್ಷೇತ್ರದಲ್ಲಿ ಎರಡು ಸೇತುವೆಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ.

1. ಮುಂಡರಗಿ ಹೆಮ್ಮಿಗಿ ರಸ್ತೆಯ 2.80ನೇ ಕಿಮೀ. ಮುಕ್ತಾಪುರ ಹತ್ತಿರ ಸೇತುವೆ ನಿರ್ಮಾಣ ಅಂದಾಜು ಮೊತ್ತ ರೂ.100.00 ಲಕ್ಷಗಳು
2. ಮುಂಡರಗಿ-ಹಂದಲಗಿ ರಸ್ತೆ ಕಿಮೀ. 1.00 (ಮುಂಡರಗಿ ಪಟ್ಟಣ) ರಲ್ಲಿ ಸೇತುವೆ ನಿರ್ಮಾಣ- ಅಂದಾಜು ಮೊತ್ತ ರೂ.60.00 ಲಕ್ಷಗಳು

ಮೂರನೇ ಹಂತದ ಸೇತುವೆಯ ನಿರ್ಮಾಣ ಯೋಜನೆಯಲ್ಲಿ ಕೆಳಕಂಡ 2 ಸೇತುವೆ ನಿರ್ಮಾಣ ಕಾರ್ಯವನ್ನು ಕೈಗೊಂಡಿದೆ.

1. ಮುಂಡರಗಿ ಹೆಮ್ಮಿಗಿ ರಸ್ತೆಯ 11.06 ಕಿಮೀ. ನಲ್ಲಿ ಸೇತುವೆ ನಿರ್ಮಾಣ- ಅಂದಾಜು ವೆಚ್ಚ ರೂ.50.00 ಲಕ್ಷಗಳು
2. ಭೈಯರಹಳ್ಳಿ-ಮುಂಡರಗಿ ರಸ್ತೆಯ (ಕಲ್ಮಲಾ-ಶಿಗ್ಗಾಂ ರಾಜ್ಯ ಹೆದ್ದಾರಿ) ಕಿಮೀ.42.90 ರಲ್ಲಿ ಸೇತುವೆ ನಿರ್ಮಾಣ- ಅಂದಾಜು ವೆಚ್ಚ ರೂ. 50.00 ಲಕ್ಷಗಳು

ಆ) <u>ರಾಜ್ಯ ಹೆದ್ದಾರಿ ನಿರ್ವಹಣೆ:</u>

ಮುಂಡರಗಿ ಮತದಾರ ಕ್ಷೇತ್ರದಲ್ಲಿ ಒಟ್ಟು 62.5 ಕಿಮೀ. ರಸ್ತೆಯನ್ನು ರೂ.187.50 ಲಕ್ಷಗಳ ಅಂದಾಜು ಮೊತ್ತದಲ್ಲಿ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆ ಗದಗ ಪ್ಯಾಕೇಜ್‌ಯಡಿ ನಿರ್ವಹಣೆಗಾಗಿ ಕೈಗೊಳ್ಳಲಾಗಿದೆ. ರಸ್ತೆಗಳ ವಿವರ ಕೆಳಗಿನಂತಿದೆ.

1) ಕಲ್ಮಲ–ಶಿಗ್ಗಾಂ ರಾಜ್ಯ ಹೆದ್ದಾರಿ– 24.9 ಕಿಮೀ.

2) ಅರಬಾವಿ–ಚಳ್ಳಕೆರೆ ರಾಜ್ಯ ಹೆದ್ದಾರಿ-- 37.6 ಕಿಮೀ.

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಮಂಜೂರಾದ ಸೇತುವೆಗಳ ಯಾವ ಯಾವ ಕೆಲಸ ಪ್ರಾರಂಭವಾಗಿದೆ ಹಾಗೂ ಪ್ರಾರಂಭವಾಗದಿರುವ ಕೆಲಸಗಳಾವುವು;

ಮೇಲಿನ ಎರಡು ಹಂತದ ಸೇತುವೆಯ ನಿರ್ಮಾಣ ಕಾಮಗಾರಿಗಳಲ್ಲಿ ಮುಂಡರಗಿ–ಹೆಮ್ಮಿಗಿ ರಸ್ತೆಯ 2.80 ರಲ್ಲಿನ ಸೇತುವೆಯ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಅಪ್ರೋಚ್ ರಸ್ತೆ ರಕ್ಷಣಾ ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ ಮೂರು ಸೇತುವೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಇ) ಪ್ರಾರಂಭವಾಗದಿರಲು ಕಾರಣಗಳೇನು;

ಈ ಸೇತುವೆಯ ನಕ್ಷೆ, ವಿನ್ಯಾಸ ತಯಾರಿಕೆಯ ಕಾರ್ಯಗಳು ಪ್ರಗತಿಯಲ್ಲಿವೆ. ಸದರಿ ಕಾರ್ಯ ಪೂರ್ಣಗೊಂಡ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಈ) ಈ ವರ್ಷ ಯಾವ ಯಾವ ಹೊಸ ಕೆಲಸಗಳಿಗಾಗಿ ಯೋಜನೆ ತಯಾರಿಸಲಾಗಿದೆ; (ವಿವರ ನೀಡುವುದು)?

ಯಾವುದು ಇರುವುದಿಲ್ಲ.

ಕರ್ನಾಟಕ ವಿಧಾನ ಸಭೆ

12ನೇ ವಿಧಾನಸಭೆ 5ನೇ ಅಧಿವೇಶನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1552

ಸದಸ್ಯರ ಹೆಸರು : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)

ಉತ್ತರಿಸುವ ದಿನಾಂಕ : 20–03–2007

ಉತ್ತರಿಸುವ ಸಚಿವರು : ಲೋಕೋಪಯೋಗಿ ಹಾಗೂ ಇಂಧನ ಸಚಿವರು

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ 2007–08ನೇ ಸಾಲಿನಲ್ಲಿ ನಬಾರ್ಡ್, ಸಿಆರ್ಎಫ್ ಮುಂತಾದ ಯೋಜನೆಗಳ ಮೂಲಕ ಕೈಗೊಳ್ಳಲಿರುವ ರಸ್ತೆ ಹಾಗೂ ಸೇತುವೆ ಕಾಮಗಾರಿಗಳು ಯಾವುವು?

ನಬಾರ್ಡ್ ಯೋಜನೆಯಡಿ 2007–08ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿರುವುದಿಲ್ಲ, ಸಿ.ಆರ್.ಎಫ್ ಯೋಜನೆ ಅಡಿಯಲ್ಲಿಯೂ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಇನ್ನೂ ಅನುದಾನ ನಿಗದಿಪಡಿಸಿರುವುದಿಲ್ಲ. ಇದಲ್ಲದೆ ಬೇರೆ ಯೋಜನೆಗಳಡಿಯಲ್ಲಿಯೂ 2007–08ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಬಗ್ಗೆ ಇನ್ನೂ ನಿರ್ಧರಿಸಿರುವುದಿಲ್ಲ.